## ಸ್ನೇಹಪ್ರಭ

### ಪ್ರಕೃತಿ ವಿಕೋಪಗಳು ಭಗವಂತನ ಶಾಪದ ಫಲವೇ? ಹಾಗಾದರೆ, ಭಗವಂತನು ಕರುಣಾಳು ಹೇಗಾದಾನು? ಸಂಕಷ್ಟವನ್ನು ನೀಡುವ ದೇವರ ಅವಶ್ಯಕತೆ ನಮಗೆ ಏಕೆ ತಾನೇ ಇದೆ?

ಪ್ರಕೃತಿ ವಿಕೋಪಗಳು ಪ್ರಾಕೃತಿಕ ನಿಯಮಗಳಿಗೆ ಅನುಸಾರವಾಗಿ ನಡೆಯುತ್ತವೆ. ನಮಗೆ ಅದರಿಂದ ನಷ್ಟವಾಗುವುದರಿಂದ, ಪ್ರಾಣಹಾನಿಯಾಗುವುದರಿಂದ ಪ್ರಕೃತಿ ವಿಕೋಪ ಎಂದು ಕರೆಯುತ್ತೇವೆ. ಸಮುದ್ರದ ಮೇಲೆ ಅಥವಾ ಹಿಮಾಲಯದ ಮೇಲೆ ಅಥವಾ ಇನ್ನಾವುದಾದರೂ ಮಾನವ ವಸತಿ ಇಲ್ಲದ ಪ್ರದೇಶದಲ್ಲಿ ಮಳೆ ಸುರಿದರೆ ಅದನ್ನು ಪ್ರಕೃತಿ ವಿಕೋಪ ಎಂದು ನಾವು ಕರೆಯುವುದಿಲ್ಲ. ಇವೆಲ್ಲ ಸ್ವಾಭಾವಿಕವಾದ ಪ್ರಾಕೃತಿಕ ವ್ಯತ್ಯಯಗಳು. ಇವು ಆಗಾಗ ನಡೆಯುತ್ತಲೇ ಇರುತ್ತವೆ. ಅವುಗಳಿಗೆ ಒಳಗಾಗಿ ನಾವು ಇದು 'ಭಗವಂತನ ಶಾಪ' ಎಂದು ಕರೆಯುವುದು ಮೂರ್ಖತನ.

ಈ ಪ್ರಪಂಚದಲ್ಲಿ ಹಲವಾರು ರೀತಿಯ ಕಷ್ಟಗಳು, ಸಮಸ್ಯೆಗಳು ಸ್ವಾಭಾವಿಕವಾಗಿ ಬಂದುಹೋಗುತ್ತವೆ ಮತ್ತು ಎಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಇವುಗಳಿಗೆ ಒಳಗಾಗಬೇಕಾಗುತ್ತದೆ. ಈ ಜೀವನವೇ ಸುಖದುಃಖಗಳ ಮಿಶ್ರಣ. ನಮಗೆ ಸುಖ ಮಾತ್ರ ಬೇಕು, ದುಃಖ ಬೇಡ ಎಂದರೆ ಆಗುವುದಿಲ್ಲ.

ನಮಗೆ ಗುಲಾಬಿ ಬೇಕಾದರೆ ಅದರ ಮುಳ್ಳನ್ನೂ ಸಹಿಸಿಕೊಳ್ಳಬೇಕು. ನಮಗೆ ಹಿತಕರವಾದ ವಾಯು ಬೇಕಾದರೆ, ಕೆಲವೊಮ್ಮೆ ಬಿರುಗಾಳಿಯನ್ನೂ ಸಹಿಸಿಕೊಳ್ಳಬೇಕು. ನಮಗೆ ಮಳೆ ಬೇಕಾದರೆ ಅತಿವೃಷ್ಟಿ ಅನಾವೃಷ್ಟಿಗಳನ್ನೂ ಸಹಿಸಿಕೊಳ್ಳಬೇಕು.

ಈ ಜೀವನವೇ ದ್ವಂದ್ವಮಯ. ಭಗವಂತನು ದ್ವಂದ್ವಾತೀತ. ದ್ವಂದ್ವವುಳ್ಳವನು ಮಾತ್ರ ದ್ವಂದ್ವಗಳಿಗೆ ಕಾರಣನಾಗಬಲ್ಲ. ನಮ್ಮ ಸುಖದುಃಖಗಳಿಗೆ ದೇವರು ಕಾರಣ ಎಂದಾಗಲಿ, ಅಥವಾ ಮತ್ತಾರೋ ಕಾರಣ ಎಂದಾಗಲಿ ಹೇಳಿ, ಅವರನ್ನು ದೂಷಿಸುವುದು ಬಾಲಿಶವಾಗುತ್ತದೆ.

ನಮ್ಮ ಮನಸ್ಸನ್ನು ಭಗವಂತನ ಎತ್ತರಕ್ಕೆ ಏರಿಸಲು ಪ್ರಯತ್ನಪಡಬೇಕು. ಆಗ ನಾವೂ ದ್ವಂದ್ವಾತೀತರಾಗುತ್ತೇವೆ. ಆಗ ಮಾತ್ರ ಸುಖದುಃಖಾದಿ ದ್ವಂದ್ವಗಳಿಂದ ವಿಚಲಿತರಾಗದೆ, ಎಲ್ಲ ಪರಿಸ್ಥಿತಿಯಲ್ಲಿಯೂ ಶಾಂತಿಯಿಂದ ಇರಲು ನಮಗೆ ಸಾಧ್ಯವಾಗುತ್ತದೆ.

(**ಬರಹ:** ಸ್ವಾಮಿ ನಿತ್ಯಸ್ಥಾನಂದ)

## ವಾರ್ತಾ ವಿಶ್ಲೇಷಣೆ

# ಸಂಕಷ್ಟದಲ್ಲೂ ಸಂತಸ

**ಉ**ತ್ತರ ಕರ್ನಾಟಕದ ೧೫ ಜಿಲ್ಲೆಗಳು ಇತ್ತೀಚೆಗೆ ಪ್ರವಾಹಪೀಡಿತವಾದುವು. ೧೫ ಲಕ್ಷಕ್ಕೂ ಹೆಚ್ಚು ಜನ ಸಂತ್ರಸ್ತರಾದರು. ೪೨೯೨ ಹಳ್ಳಿಗಳ ೬,೫೫,೪೮೪ ಮನೆಗಳು ಹಾನಿಗೊಳಗಾದವು. ೨೨೮ ಜನ ಸತ್ತರು. ಇದುವರೆಗೆ ನಾವು ನೋಡಿದ್ದು ಅಂಕಿ–ಅಂಶಗಳನ್ನು. ಆದರೆ ಸಂತ್ರಸ್ತರಾದ ಜನರ ಮನೋಭಾವನೆ ಹೇಗಿದೆ? ಪ್ರಕೃತಿಯ ಈ ಮುನಿಸನ್ನು ಅವರು ಹೇಗೆ ಸ್ವೀಕರಿಸಿದ್ದಾರೆ? ಇದನ್ನು ತಿಳಿಯಲು ಆ ಹಳ್ಳಿಗಳಿಗೇ ಭೇಟಿ ನೀಡಬೇಕು. ಹೀಗೆ ಭೇಟಿಕೊಟ್ಟ ರಾಮಕೃಷ್ಣ ಮಿಷನ್ನಿನ ಸಂನ್ಯಾಸಿ ವೃಂದವು ಅಲ್ಲಿ ಕಂಡದ್ದು, ಜನರ ಮುಖದಲ್ಲಿ ಸಂಕಟದ ನೋವನ್ನಲ್ಲ, ಸಂಕಷ್ಟವನ್ನು ಸಮಾಧಾನದಿಂದ ಎದುರಿಸಿದ ನಿರ್ಲಿಪ್ತತೆಯನ್ನು; ಭವಿಷ್ಯದ ಬಗೆಗಿನ ಆಶಾಭಾವನೆಯನ್ನು; ದುರ್ಬಲಗೊಳ್ಳದ ಭಗವದ್ಭಕ್ತಿ ಮತ್ತು ವಿಶ್ವಾಸಗಳನ್ನು. ಇಂತಹ ಕಷ್ಟದ ಪರಿಸ್ಥಿತಿಯಲ್ಲಿಯೂ ಕಡುಬಡವರಾದ ಜನತೆ ಪ್ರಾಮಾಣಿಕತೆಯನ್ನು ಮೆರೆದಿದ್ದು ಅಭಿಮಾನಪಡುವ ವಿಷಯ. ಪರಿಹಾರ ಸಾಮಗ್ರಿಗಳನ್ನು ವಿತರಿಸಲು ಕುಟುಂಬಕ್ಕೊಂದರಂತೆ ಕಾರ್ಡುಗಳನ್ನು ವಿತರಿಸಿದಾಗ, ಉಪಯೋಗಿಸದೆ ಉಳಿದ ಕಾರ್ಡುಗಳನ್ನು ದುರುಪಯೋಗ ಮಾಡಿಕೊಳ್ಳದೆ, ಪ್ರಾಮಾಣಿಕವಾಗಿ ಜನ ಹಿಂತಿರುಗಿಸಿದರು. ಅದಲ್ಲದೆ, ಇಂಥದ್ದನ್ನೇ ಕೊಡಿ ಎಂದು ಯಾವ ಗ್ರಾಮದ ಜನರೂ ಒತ್ತಾಯ ಮಾಡಲಿಲ್ಲ; ತಮಗೆ ಯಾರೂ ಏನೂ ಕೊಟ್ಟಿಲ್ಲ ಎಂದು ಎಲ್ಲಿಯೂ ದೂರು ನೀಡಲಿಲ್ಲ. ಸರ್ಕಾರ ಮತ್ತು ಹತ್ತು ಹಲವು ಸಂಘಸಂಸ್ಥೆಗಳು ನೀಡಿರುವ ಸಹಾಯವನ್ನು ಕೃತಜ್ಞತೆಯಿಂದ ಅವರು ಸ್ಮರಿಸಿಕೊಂಡರು; ರಾಮಕೃಷ್ಣ ಮಿಷನ್ ನೀಡುತ್ತಿರುವ ಪರಿಹಾರವನ್ನೂ ಸಂತೋಷದಿಂದ ಸ್ವೀಕರಿಸಿದರು. ದುರ್ಭರ ಪರಿಸ್ಥಿತಿಯಲ್ಲಿಯೂ ಸಂನ್ಯಾಸಿಗಳ ಬಗ್ಗೆ ಅಪಾರ ಗೌರವಾದರಗಳನ್ನು ಸಂತ್ರಸ್ತ ಜನತೆ ತೋರುತ್ತಿದ್ದರು. ಅವರ ಮುಖದಲ್ಲಿ ತಾಪತ್ರಯದ ನೋವಿನ ಗುರುತೂ ಇರಲಿಲ್ಲ.

ಇದು ನಮಗೆ ಕಲಿಸುವ ಪಾಠ ಏನು? ಪಟ್ಟಣಗಳಲ್ಲಿ ವಾಸಿಸುವ ಆಧುನಿಕ ಸುಶಿಕ್ಷಿತ ಸಮಾಜ ಇಂದು ಮಾನಸಿಕ ಒತ್ತಡದಿಂದ ಬಳಲುತ್ತಿದೆ. ಅದಕ್ಕೆ ಪ್ರಾಪಂಚಿಕ ಭೋಗಾಸಕ್ತಿಯೇ ಕಾರಣ. ಆದರೆ ಗ್ರಾಮವಾಸಿಗಳು, ಭೌತಿಕವಾಗಿ ಬಡತನದಿಂದ ಜೀವಿಸುತ್ತಿದ್ದರೂ, ಶೈಕ್ಷಣಿಕವಾಗಿ ನಿರಕ್ಷರಕುಕ್ಷಿಗಳಾಗಿದ್ದರೂ, ಆಧ್ಯಾತ್ಮಿಕವಾಗಿ ಸುಸಂಪನ್ನರಾಗಿದ್ದಾರೆ. ಈ ಆಧ್ಯಾತ್ಮಿಕ ಪ್ರೌಢತೆಯೇ, ಆತಂಕದಲ್ಲಿಯೂ ಆನಂದವನ್ನು ಕಂಡುಕೊಳ್ಳಲು ಅವರಿಗೆ ನೆರವಾಗಿದೆ. ಇಂಥ ಲಕ್ಷಾಂತರ ಗ್ರಾಮವಾಸಿಗಳ ಭಾವಸಂಪನ್ನತೆಯೇ ಭಾರತವನ್ನು ಆಧ್ಯಾತ್ಮಿಕತೆಯ ತವರೂರನ್ನಾಗಿ ಮಾಡಿದೆ.